**ಉತ್ತರ ಪತ್ರಿಕೆಯ ಮರುಎಣಿಕೆಗಾಗಿ ಅರ್ಜಿ**

# ಕರ್ನಾಟಕ ಸರ್ಕಾರ

## ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು–560 003

ಏಪ್ರಿಲ್/ಜೂನ್ 20........ ರ ಎಸ್.ಎಸ್.ಎಲ್.ಸಿ. ಪರೀಕ್ಷೆ

**ನಮೂನೆ**

**1.** ಅಭ್ಯರ್ಥಿ ಹೆಸರು ಮತ್ತು ಪೂರ್ಣ ಅಂಚೆ ವಿಳಾಸ :
(ಪಿನ್ ಕೋಡ್ ಕಡ್ಡಾಯ)

ದೂರವಾಣಿ ಸಂಖ್ಯೆ :
ಸ್ಥಿರ : ಮೊಬೈಲ್: | | | | | | | | | | |

**2.** ಅಭ್ಯರ್ಥಿ ನೋಂದಣಿ ಸಂಖ್ಯೆ : | | | | | | | | | | | |

ಪರೀಕ್ಷೆ ವರ್ಷ..........................ಮತ್ತು ತಿಂಗಳು.....................................

**3.** ಅಭ್ಯರ್ಥಿ ಓದಿದ ಪ್ರೌಢಶಾಲೆ/
ಸಂಯುಕ್ತ ಪದವಿ ಪೂರ್ವ ಕಾಲೇಜಿನ ಹೆಸರು,
ವಿಳಾಸ:
ಶಾಲಾ ಸಂಕೇತ ಸಂಕೇತ : | | | | | | |

**4.** ಪರೀಕ್ಷಾ ಕೇಂದ್ರದ ಸಂಕೇತ : | | | | | |

**5.** ಮರುಎಣಿಕೆಗಾಗಿ ಅರ್ಜಿ ಸಲ್ಲಿಸಬಯಸುವ ವಿಷಯ/ಗಳು

| ವಿಷಯ | ವಿಷಯ ಸಂಕೇತ ಸಂಖ್ಯೆ | ಬಾಹ್ಯ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳು | ಮಾಧ್ಯಮ |
|---|---|---|---|
| 1. ಪ್ರಥಮ ಭಾಷೆ............................................ | | | |
| 2. ದ್ವಿತೀಯ ಭಾಷೆ.......................................... | | | |
| 3. ತೃತೀಯ ಭಾಷೆ.......................................... | | | |
| 4. ಗಣಿತ | 81 | | |
| 5. ವಿಜ್ಞಾನ | 83 | | |
| 6. ಸಮಾಜ ವಿಜ್ಞಾನ | 85 | | |

**6.** ಪಾವತಿಸಿದ ಶುಲ್ಕ ಮೊತ್ತ ರೂ......................ಅಕ್ಷರಗಳಲ್ಲಿ...........................................................................
ನಗದು/ಬ್ಯಾಂಕ್ NEFT ಚಲನ್‌ನ UTR/TSL* ಸಂಖ್ಯೆ......................ದಿನಾಂಕ: ..................................................
ಬ್ಯಾಂಕ್ ಹೆಸರು ಮತ್ತು ಶಾಖೆ/ಬೆಂಗಳೂರು ಒನ್ ಕೇಂದ್ರ/ಕರ್ನಾಟಕ ಒನ್ ಕೇಂದ್ರ* ............................................
*ಅನ್ವಯಿಸದಿರುವ ಭಾಗವನ್ನು ಹೊಡೆದು ಹಾಕುವುದು.

ದಿನಾಂಕ: ಅಭ್ಯರ್ಥಿ/ಪೋಷಕರ ಸಹಿ

**ವಿಶೇಷ ಸೂಚನೆ: ಅರ್ಜಿಗೆ ಸಂಬಂಧಿಸಿದ ಸೂಚನೆಗಳನ್ನು ಹಿಂಬದಿಯಲ್ಲಿ ನೀಡಲಾಗಿದೆ.**

**ಸೂಚನೆಗಳು**

1. ಅಂಕಗಳ ಮರುಎಣಿಕೆಗಾಗಿ ನಿಗದಿಪಡಿಸಿರುವ ಶುಲ್ಕ ಪ್ರತಿ ವಿಷಯಕ್ಕೆ ರೂ. 150/–
2. ಮರುಎಣಿಕೆ ಅರ್ಜಿಯು ಬಾಹ್ಯ ಪರೀಕ್ಷೆಗೆ ಮಾತ್ರ ಸೀಮಿತ, ಆಂತರಿಕ ಪರೀಕ್ಷೆಯ ಅಂಕಗಳಲ್ಲಿ ವ್ಯತ್ಯಾಸವಿದ್ದಲ್ಲಿ ಸಂಬಂಧಿಸಿದ ಶಾಲಾ ಮುಖ್ಯೋಪಾಧ್ಯಾಯರನ್ನು ಸಂಪರ್ಕಿಸುವುದು.
3. ಛಾಯಾ ಪ್ರತಿಗೆ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಮರು ಎಣಿಕೆಗೆ ಅರ್ಜಿ ಸಲ್ಲಿಸುವಂತಿಲ್ಲ.
4. ಮರುಎಣಿಕೆಗಾಗಿ ಅರ್ಜಿಯನ್ನು ಎಸ್.ಎಸ್.ಎಲ್.ಸಿ. ಪರೀಕ್ಷೆ ಫಲಿತಾಂಶ ಪ್ರಕಟವಾದ ಹತ್ತು ದಿನಗಳೊಳಗಾಗಿ ಸಲ್ಲಿಸುವುದು.
5. ಮರುಎಣಿಕೆ ಶುಲ್ಕವನ್ನು ನಿಗದಿತ ಬ್ಯಾಂಕ್ NEFT ಚಲನ್ ಮೂಲಕ (ಚಲನ್ ಪ್ರತಿ ಲಗತ್ತಿಸಿದೆ) ಯಾವುದೇ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಪಾವತಿಸಿ ಮೂಲ ಚಲನ್ ಪ್ರತಿಯನ್ನು, ಭರ್ತಿ ಮಾಡಿರುವ ಅರ್ಜಿಯೊಂದಿಗೆ ಲಗತ್ತಿಸಿ ಮಂಡಳಿಯ ಈ ಕೆಳಕಂಡ ವಿಳಾಸಕ್ಕೆ ಖುದ್ದಾಗಿ ಅಥವಾ ರಿಜಿಸ್ಟರ್ ಅಂಚೆಯ ಮೂಲಕವಾಗಲಿ ಸಲ್ಲಿಸಬಹುದು, ನಗದು ರೂಪದಲ್ಲಿ ಶುಲ್ಕ ಭರಿಸುವ ಸೌಲಭ್ಯ ಮಂಡಳಿಯ ಕಚೇರಿಯಲ್ಲಿ ಲಭ್ಯವಿರುವುದಿಲ್ಲ.

**"ಸಹಾಯಕ ನಿರ್ದೇಶಕರು, 'ಯು' ಶಾಖೆ, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡರಸ್ತೆ, ಬೆಂಗಳೂರು–560 003"**

**ಅಥವಾ**

ಮರುಎಣಿಕೆ ಶುಲ್ಕವನ್ನು ನಗದು ರೂಪದಲ್ಲಿ ಪಾವತಿಸಲು ಬಯಸುವವರು ಖುದ್ದಾಗಿ **ಬೆಂಗಳೂರು ಒನ್** ಕೇಂದ್ರ ಅಥವಾ **ಕರ್ನಾಟಕ ಒನ್** ಕೇಂದ್ರಗಳ ಮೂಲಕ ಪಾವತಿಸಿ ಅರ್ಜಿ ಸಲ್ಲಿಸಬಹುದಾಗಿದೆ. ಹಾಗೆಯೇ ಚಲನ್ ರೂಪದಲ್ಲಿ ಶುಲ್ಕ ಭರಿಸುವ ಸೌಲಭ್ಯ **ಬೆಂಗಳೂರು ಒನ್** ಕೇಂದ್ರ ಮತ್ತು **ಕರ್ನಾಟಕ ಒನ್** ಕೇಂದ್ರಗಳಲ್ಲಿ ಲಭ್ಯವಿರುವುದಿಲ್ಲ.

6. **ಬೆಂಗಳೂರು ಒನ್** ಕೇಂದ್ರ ಅಥವಾ ರಾಜ್ಯದ **ಕರ್ನಾಟಕ ಒನ್** ಕೇಂದ್ರಗಳಲ್ಲಿ ಖುದ್ದಾಗಿ ಮಾತ್ರ ಅರ್ಜಿ ಸಲ್ಲಿಸುವುದು.
7. **ಅಭ್ಯರ್ಥಿ ತನ್ನ ಹೆಸರು ಮತ್ತು ನೋಂದಣಿ ಸಂಖ್ಯೆ, ಮೊಬೈಲ್ ಸಂಖ್ಯೆ ಸಹಿತ ಎಲ್ಲಾ ವಿವರಗಳನ್ನು ಸ್ಪಷ್ಟವಾಗಿ ಅರ್ಜಿ ಮತ್ತು ಬ್ಯಾಂಕ್ NEFT ಚಲನ್‌ನಲ್ಲಿ ನೀಡಿರುವ ನಿಗದಿತ ಅಂಕಣಗಳಲ್ಲಿ ನಮೂದಿಸಬೇಕು.**
8. ಪೋಷಕರ/ವಿದ್ಯಾರ್ಥಿ ಸಹಿ ಇಲ್ಲದಿರುವ, ಅಪೂರ್ಣ, ತಪ್ಪು ವಿವರಗಳುಳ್ಳ, ಹಾಗೂ ನಿಗದಿತ ಅಂತಿಮ ದಿನಾಂಕದ ನಂತರ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಮತ್ತು ಶುಲ್ಕವನ್ನು ಮಂಡಳಿಗೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
9. ಮರುಎಣಿಕೆ ಫಲಿತಾಂಶವನ್ನು ಸಂಬಂಧಪಟ್ಟ ವಿದ್ಯಾರ್ಥಿಯ ಉತ್ತರ ಪತ್ರಿಕೆ ಪರಿಶೀಲನೆಯಾದ ನಂತರ ತಿಳಿಸಲಾಗುವುದು.
10. ಮರುಎಣಿಕೆಯಲ್ಲಿ ಅಂಕಗಳು ಏನಾದರೂ ವ್ಯತ್ಯಾಸವಾಗಿದ್ದಲ್ಲಿ ಮೂಲ ಅಂಕಪಟ್ಟಿಯನ್ನು ಮೂವತ್ತು ದಿನಗಳೊಳಗಾಗಿ ಪರೀಕ್ಷಾ ಮಂಡಳಿಗೆ ಸಲ್ಲಿಸಿ ಪರಿಷ್ಕೃತ ಅಂಕಪಟ್ಟಿಯನ್ನು ಪಡೆಯುವುದು.
11. **ಅನುತ್ತೀರ್ಣ ವಿದ್ಯಾರ್ಥಿಗಳು ಮರುಎಣಿಕೆಗಾಗಿ ಅರ್ಜಿ ಸಲ್ಲಿಸಿದ್ದಲ್ಲಿ ಫಲಿತಾಂಶಕ್ಕಾಗಿ ಕಾಯದೆ ಮುಂದಿನ ಪರೀಕ್ಷೆಗೆ ಶುಲ್ಕ ಪಾವತಿಸಿ ಅರ್ಜಿಯನ್ನು ಸಲ್ಲಿಸಬೇಕು. ಮುಂದಿನ ಪರೀಕ್ಷೆಗೆ ಅರ್ಜಿ ಸಲ್ಲಿಸದಿದ್ದಲ್ಲಿ ಅಭ್ಯರ್ಥಿಯೇ ಜವಾಬ್ದಾರರಾಗಿರುತ್ತಾರೆ.**
12. ಅರ್ಜಿಯೊಂದಿಗೆ ಅಭ್ಯರ್ಥಿಯ ಪ್ರಸಕ್ತ ಸಾಲಿನ ಪರೀಕ್ಷೆ ಪ್ರವೇಶ ಪತ್ರದ ಛಾಯಾಪ್ರತಿಯನ್ನು ತಪ್ಪದೇ ಅರ್ಜಿಯೊಂದಿಗೆ ಲಗತ್ತಿಸಬೇಕು ಅಥವಾ ಮುಖ್ಯ ಶಿಕ್ಷಕರ ದೃಢೀಕರಣ ಪತ್ರ ಲಗತ್ತಿಸುವುದು.
13. ಮರುಎಣಿಕೆಯಲ್ಲಿ ಅಂಕಗಳು ಹೆಚ್ಚಾದಲ್ಲಿ ಅಂಚೆ ವೆಚ್ಚ ಹಾಗು ಆಡಳಿತಾತ್ಮಕ ವೆಚ್ಚಗಳನ್ನು ಕಳೆದು ಉಳಿಕೆ ಹಣವನ್ನು ಹಿಂದಿರುಗಿಸಲಾಗುವುದು.
14. ಅಂಚೆ ಮೂಲಕ ಒಂದೇ ಅರ್ಜಿಯಲ್ಲಿ ಒಂದಕ್ಕಿಂತ ಹೆಚ್ಚಿನ ವಿಷಯಗಳಿಗೆ ಅರ್ಜಿ ಸಲ್ಲಿಸಬಹುದು ಒಂದಕ್ಕಿಂತ ಹೆಚ್ಚು ವಿಷಯಗಳಿಗೆ ಅರ್ಜಿ ಸಲ್ಲಿಸಿದಲ್ಲಿ ಒಂದೇ ಬ್ಯಾಂಕ್ NEFT ಚಲನ್‌ನಲ್ಲಿ ಆ ಎಲ್ಲಾ ವಿಷಯಗಳ ಶುಲ್ಕ ಮೊತ್ತ ಪಾವತಿಸಬಹುದು.
15. **ಬೆಂಗಳೂರು ಒನ್** ಕೇಂದ್ರ ಅಥವಾ ರಾಜ್ಯದ **ಕರ್ನಾಟಕ ಒನ್** ಕೇಂದ್ರಗಳಲ್ಲೂ ಸಹ ಒಂದೇ ಅರ್ಜಿಯಲ್ಲಿ ಒಂದಕ್ಕಿಂತ ಹೆಚ್ಚು ವಿಷಯಗಳಿಗೆ ಅರ್ಜಿ ಸಲ್ಲಿಸಿದಲ್ಲಿ ಆ ಎಲ್ಲಾ ವಿಷಯಗಳ ಶುಲ್ಕ ಮೊತ್ತವನ್ನು ನಗದು ರೂಪದಲ್ಲಿ ಪಾವತಿಸಿ ಅರ್ಜಿ ಸಲ್ಲಿಸಬಹುದು.
16. ಛಾಯಾಪ್ರತಿ, ಮರುಎಣಿಕೆ, ಮರುಮೌಲ್ಯಮಾಪನ ಅರ್ಜಿ ಮತ್ತು NEFT ಚಲನ್ ನಮೂನೆ ಮಂಡಳಿಯ ಅಂತರ್ಜಾಲ ತಾಣ ವಿಳಾಸ www.kseeb.kar.nic.in ವಿಳಾಸದಲ್ಲೂ ಸಹ ಲಭ್ಯವಿರುತ್ತವೆ,

ಸಹಿ
ನಿರ್ದೇಶಕರು (ಪರೀಕ್ಷೆಗಳು)